C.C– 611/2025

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 06.03.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ.ಎನ್.ಎಸ್.ಹೆಚ್ ರವರಿಂದಃ–**

**1.** ನಾನು ಆಟೋ ಓಡಿಸುತ್ತಿದ್ದು, ತಿಂಗಳಿಗೆ ನನಗೆ ಎಲ್ಲಾ ಮೂಲಗಳಿಂದ ಸುಮಾರು 45 ಸಾವಿರ ರೂ.ಗಳ ಆದಾಯ ಇದೆ. ನನಗೆ ಬರುವ ಆದಾಯವು ನಗದಾಗಿ ಬರುತ್ತಿದ್ದು, ಖಾತೆ ಮೂಲಕ ನಾನು ಸಣ್ಣ ಪುಟ್ಟ ವ್ಯವಹಾರವನ್ನು ಮಾತ್ರ ಮಾಡಿದ್ದೇನೆ. ನಾನು ಬೇರೆ ಯಾರಿಗೂ ಸಾಲ ಕೊಟ್ಟಿಲ್ಲ ಮತ್ತು ಸಾಲ ಪಡೆದಿಲ್ಲ. ಸಾಲದ ವಿಚಾರವಾಗಿ ನಾನು ಬೇರೆ ಕೇಸನ್ನು ಹಾಕಿಲ್ಲ ಮತ್ತು ಯಾವುದೇ ಕೇಸಿನಲ್ಲಿ ನಾನು ಆರೋಪಿತನಾಗಿಲ್ಲ. ನಾನು ಗಣಪತಿ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಮತ್ತು ಕರ್ನಾಟಕ ಬ್ಯಾಂಕುಗಳಲ್ಲಿ ಖಾತೆಗಳನ್ನು ಹೊಂದಿದ್ದೇನೆ. ಗಣಪತಿ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ನಲ್ಲಿ 2022 ರಲ್ಲಿ 1 ಲಕ್ಷ ರೂ.ಗಳನ್ನು ಸಾಲವಾಗಿ ಪಡೆದಿದ್ದೆ. ಸದರಿ ಸಾಲವನ್ನು ನಾನು ಡಿಫಾಲ್ಟರ್ ಆಗಿ ನೋಟೀಸ್ ಬಂದ ನಂತರ ಮರು ಪಾವತಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

**2.** ಆರೋಪಿತನಿಗೆ 1,50,000/– ರೂ.ಗಳನ್ನು ನಗದಾಗಿ ಕೊಟ್ಟಿದ್ದೇನೆ. ಆ ಹಣವನ್ನು ನಾನು 3–4 ವರ್ಷಗಳಿಂದ ಕೂಡಿಸಿ ಸಣ್ಣ ಪುಟ್ಟ ವ್ಯವಹಾರಕ್ಕೆಂದು ನನ್ನ ಬಳಿ ಇರಿಸಿಕೊಂಡಿದ್ದೆ. ಆರೋಪಿತನು ಹಣ ಪಡೆಯುವ 1–2 ತಿಂಗಳ ಮೊದಲಿನಿಂದಲೇ ನನ್ನ ಬಳಿ ಹಣವನ್ನು ನಾನು ಪೇಟೆಯಲ್ಲಿ ಸಿಕ್ಕಾಗ ಸುಮಾರು 4–5 ಬಾರಿ ಕೇಳಿದ್ದನು. ಆರೋಪಿತನು ನನ್ನನ್ನು ಹಣ ಕೇಳಿಲ್ಲ ಹಾಗೂ ನಾನು ಹಣ ಕೊಟ್ಟಿಲ್ಲ ಮತ್ತು ಆರೋಪಿತನು ಸಾಲದ ತಿರುವಳಿಗಾಗಿ ನಿಪಿ–1 ರ ಚೆಕ್ ಅನ್ನು ನನಗೆ ನೀಡಿಲ್ಲ ಎನ್ನುವುದು ಸರಿಯಲ್ಲ.

**3.** ಸಾಗರ ಫೈನಾನ್ಸ್‌ನ ಎಸ್ ಪಿ ಅರವಿಂದರವರು ನನಗೆ ಪರಿಚಯವಿದ್ದಾರೆ. ನನ್ನನ್ನು ಅವರೇ ಈ ದಿನ ಕೋರ್ಟಿಗೆ ಕರೆದುಕೊಂಡು ಬಂದಿದ್ದಾರೆ ಎನ್ನುವುದು ಸರಿಯಲ್ಲ. ಆರೋಪಿತನ ಭಾವ ರವಿ ಎನ್ನುವವರು ಎಸ್ ಪಿ ಅರವಿಂದರವರ ಬಳಿ 2022 ಅಕ್ಟೋಬರ್ ನಲ್ಲಿ 50 ಸಾವಿರ ರೂ.ಗಳನ್ನು ಸಾಲವಾಗಿ ಪಡೆದುಕೊಂಡಾಗ ಸದರಿ ಸಾಲಕ್ಕೆ ಜಾಮೀನುದಾರನಾಗಿ ಆರೋಪಿತನು ನಿಪಿ–1 ರ ಚೆಕ್ಕಿಗೆ ಸಹಿ ಮಾಡಿ ಉಳಿದ ವಿವರಗಳನ್ನು ಖಾಲಿ ಬಿಟ್ಟು ಎಸ್ ಪಿ ಅರವಿಂದ ರವರಿಗೆ ನೀಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಜನವರಿ 2023 ರಲ್ಲಿ ಸದರಿ ರವಿ ಮತ್ತು ಎಸ್ ಪಿ ಅರವಿಂದರವರ ನಡುವೆ ಮಾತುಕತೆಯಾಗಿ 80 ಸಾವಿರ ರೂ.ಗಳಿಗೆ ತೀರ್ಮಾನವಾಗಿ ಆ ಪೈಕಿ 75 ಸಾವಿರ ರೂ.ಗಳನ್ನು ರವಿ ರವರು

ಅರವಿಂದರವರಿಗೆ ಪಾವತಿಸಿದ್ದನು ಎಂದರೆ ನನಗೆ ಗೊತ್ತಿಲ್ಲ. ಬಾಕಿ ಉಳಿದ 5 ಸಾವಿರ ರೂ.ಗಳಿಗಾಗಿ ಆರೋಪಿತನು ಭದ್ರತೆಗಾಗಿ ಕೊಟ್ಟಿದ್ದ ನಿಪಿ–1 ರ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ನನ್ನ ಮೂಲಕ ಈ ಪ್ರಕರಣವನ್ನು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ.

**4.** ನಿಪಿ–1 ರ ಚೆಕ್ಕಿನಲ್ಲಿನ ಸಹಿಯನ್ನು ಹೊರತು ಪಡಿಸಿ ಉಳಿದ ಬರವಣಿಗೆ ಆರೋಪಿತನದ್ದಲ್ಲ ಎಂದರೆ, ಇರಬಹುದು. ಆರೋಪಿತನೊಂದಿಗೆ ನಾನು ಯಾವುದೇ ವ್ಯವಹಾರ ಮಾಡದೇ ಇದ್ದರೂ ಎಸ್ ಪಿ ಅರವಿಂದನೊಂದಿಗೆ ಕೈ ಜೋಡಿಸಿ ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.